ಶ್ರೀ ವಿ. ಸುನೀಲ್ ಕುಮಾರ್ (ಕಾರ್ಕಳ): ಮಾನ್ಯ ಅಧ್ಯಕ್ಷರೆ, ಬೇಲೂರಿನ ಚೆನ್ನಕೇಶವ ದೇವಸ್ಥಾನದ ಆವರಣದಲ್ಲಿ ಕಳೆದ ಕೆಲವು ದಿನಗಳ ಹಿಂದೆ ಮಹಮದ್ ಉಬೇದುಲ್ಲಾ ಎನ್ನುವ ವ್ಯಕ್ತಿ, ಮಸೀದಿಯನ್ನು ನಿರ್ಮಾಣಮಾಡುತ್ತಿದ್ದಾರೆಎನ್ನುವ ಸಂಗತಿ ಇತ್ತೀಚಿನ ಪತ್ರಿಕಾ ವರದಿಗಳ ಮುಖಾಂತರ ಗೊತ್ತಾಗಿದೆ. ಸರ್ವೆ ನಂ:216:2 ರಲ್ಲಿ ನಾಲ್ಕು ಎಕರೆ ಜಮೀನನ್ನು ಅತಿಕ್ರಮಣ ಮಾಡಿ ಅಲ್ಲಿ ಅನಧಿಕೃತವಾಗಿ ಮಸೀದಿ ನಿರ್ಮಾಣ ಮಾಡುತ್ತಿದ್ದರೂ ಕೂಡ ಸರ್ಕಾರ ಯಾವುದೇ ಕ್ರಮವನ್ನು ಇಲ್ಲಿಯ ತನಕ ಕೈಗೊಂಡಿಲ್ಲ. ಹೊಯ್ಸಳರ ದೇವಸ್ಥಾನದ ಚೆನ್ನಕೇಶವ ದೇವಸ್ಥಾನದಲ್ಲಿ ಈ ರೀತಿಯಾದಂಥ ದೇವಸ್ಥಾನದ ಜಾಗದಲ್ಲಿ ಮಸೀದಿಯನ್ನು ನಿರ್ಮಾಣ ಮಾಡುತ್ತಿದ್ದರೂ ಕೂಡ ಪಟ್ಟಣ ಪಂಚಯಿತಿಯ ಅನುಮತಿಯನ್ನು ಇಲ್ಲಿಯ ತನಕ ಯಾವುದೇ ವ್ಯಕ್ತಿ ತೆಗೆದುಕೊಂಡಿಲ್ಲ. ಇದರ ಕುರಿತಂತೆ ಜೂನ್ 24ನೇ ತಾರೀಕು ತಹಸೀಲ್ದಾರ್ ರವರು ಮತ್ತು ಪಟ್ಟಣ ಪಂಚಾಯಿತಿಗೆ ಹಿಂದೂ ಸಂಘಟನೆಗಳು ದೂರನ್ನು ನೀಡಿದರೂ ಕೂಡ ಸರ್ಕಾರ ಅದನ್ನು ಸ್ಥಗಿತಗೊಳಿಸುವ ಯಾವುದೇ ಪ್ರಯತ್ನವನ್ನು ಮಾಡಿಲ್ಲ. ಹೀಗಾಗಿ ಆ ದೇವಸ್ಥಾನದ ಪಾವಿತ್ರತೆಯನ್ನು ಕಾಪಾಡಬೇಕು. ಆ ದೇವಸ್ಥಾನವನ್ನು ಇವತ್ತು ಪವಿತ್ರವಾಗಿ ಉಳಿಸಿಕೊಳ್ಳಬೇಕೆಂದು ಹೇಳುವುದಾದರೆ, ಯಾರು ಅನಧಿಕೃತವಾಗಿ ಮಹಮದ್ ಉಬೇದುಲ್ಲಾರವರು ಅಲ್ಲಿ ಏನು ನಿರ್ಮಾಣ ಮಾಡುತ್ತಿದ್ದಾರೆ ತಕ್ಷಣ ಸರ್ಕಾರ ಅಲ್ಲಿ ಮಧ್ಯೆ ಪ್ರವೇಶಿಸಿ ಅದನ್ನು ನಿಲ್ಲಿಸಬೇಕು ಎನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ. ಕಾರಣ, ಮಸೀದಿಯ ಭಾವ ಚಿತ್ರಗಳು ನನ್ನ ಹತ್ತಿರ ಇವೆ. ಸಂಪೂರ್ಣವಾಗಿ ಅದು ಪೂರ್ಣಗೊಳ್ಳುತ್ತಿದೆ. ಹೀಗಾಗಿ ತಕ್ಷಣ ಅದನ್ನು ಸ್ಥಗಿತಗೊಳಿಸಬೇಕು, ಯಾರು ಆ ಮಸೀದಿಯನ್ನು ನಿರ್ಮಾಣ ಮಾಡುತ್ತಿದ್ದಾರೆ ಅದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು ಎಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, (ಹೇಳಿಕೆ ಪ್ರತಿಯನ್ನು ಲಗತ್ತಿಸಿದೆ)

ವಿಧಾನ ಸಭಾ ಸದಸ್ಯರಾದ ಶ್ರೀ ಪಿ. ಸುನೀಲ್ ಕುಮಾರ್ ರವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಸರ್ಕಾರಕ್ಕೆ ಉತ್ತರ

ವಿಧಾನ ಸಭಾ ಸದಸ್ಯರಾದ ಶ್ರೀ ಪಿ. ಸುನೀಲ್ ಕುಮಾರ್ ಇವರು ಶೂನ್ಯ ವೇಳೆಯಲ್ಲಿ ಬೇಲೂರಿನ ಶ್ರೀ ಚೆನ್ನಕೇಶವ ದೇವಾಲಯಕ್ಕೆ ಸೇರಿದ ಜಾಗದಲ್ಲಿ ಮಹಮ್ಮದ್ ಉಬೇದುಲ್ಲಾ ಎಂಬುವವರು ಅಕ್ರಮವಾಗಿ ಮಸೀದಿ ನಿರ್ಮಿಸುತ್ತಿರುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್ ಬೇಲೂರು ರವರು ತಮ್ಮ ವರದಿಯಲ್ಲಿ ಶ್ರೀ ಮಹಮ್ಮದ್ ಉಬೇದುಲ್ಲಾ ಎಂಬುವವರು ಅನಧಿಕೃತವಾಗಿ ಕಟ್ಟಡವನ್ನು ಕಟ್ಟುತ್ತಿದ್ದು, ಈ ಬಗ್ಗೆ ಪಟ್ಟಣ ಪಂಚಾಯತಿಯಿಂದ ಯಾವುದೇ ಕಟ್ಟಡ ಪರವಾನಗಿ/ ಅನುಮತಿ ಪಡೆಯದೇ ಇರುವುದರಿಂದ ಕಟ್ಟಡ ಕಾಮಗಾರಿ ಕೆಲಸವನ್ನು ಸ್ಥಗಿತಗೊಳಿಸಲಾಗಿದೆ ಎಂದು ತಿಳಿಸಿರುತ್ತಾರೆ. ಶ್ರೀ ಮಹಮ್ಮದ್ ಉಬೇದುಲ್ಲಾ ಬಿನ್ ಅಬ್ದುಲ್ ರಹೀಮ್ ರವರು ದಿ:04–7–2005ರಂದು ಪಟ್ಟಣ ಪಂಚಾಯತಿಗೆ ಅರ್ಜಿ ಸಲ್ಲಿಸಿ, ಖಾತೆ ನಂ 3982/2864ರಲ್ಲಿ ಮಸೀದಿ ನಿರ್ಮಾಣ ಮಾಡಲು ಪರವಾನಗಿ ಕೇಳಿರುತ್ತಾರೆ. ದಾಖಲಾತಿಯಂತೆ ಅರ್ಜಿದಾರರ ಹೆಸರಿನಲ್ಲಿ ಖಾತೆ ಇರುವುದಿಲ್ಲ. ಇವರಿಗೆ ಪಟ್ಟಣ ಪಂಚಾಯಿತಿಯಿಂದ ಯಾವುದೇ ಕಟ್ಟಡ ಪರವಾನಗಿ ನೀಡಿಲ್ಲದೆ ಇರುವುದರಿಂದ ಇವರು ಅನಧಿಕೃತವಾಗಿ ಕಟ್ಟಡವನ್ನು ಕಟ್ಟುತ್ತಿರುವುದರಿಂದ ಕಟ್ಟಡ ಕಾಮಗಾರಿ ಕೆಲಸವನ್ನು ಸ್ಥಗಿತಗೊಳಿಸಲಾಗಿದೆ.

ತಹಶೀಲ್ದಾರ್, ಬೇಲೂರು ಉಪವಿಭಾಗಾಧಿಕಾರಿಗಳು, ಸಕಲೇಶಪುರ ಉಪ ವಿಭಾಗ ಮತ್ತು ಮುಖ್ಯಾಧಿಕಾರಿಗಳು, ಪುರಸಭೆ ಬೇಲೂರು ರವರಿಂದ ವರದಿ ಪಡೆಯಲಾಗಿದೆ. ಅದರಂತೆ ತಹಶೀಲ್ದಾರ್, ಬೇಲೂರು ರವರು ತಮ್ಮ ವರದಿಯಲ್ಲಿ ಬೇಲೂರಿನ ಅಂಬೇಡ್ಕರ್ ವೃತ್ತದ ಸಮೀಪ ಸರ್ವೆ ನಂ 216ರಲ್ಲಿ ಅನಧಿಕೃತವಾಗಿ ಕಟ್ಟಡ ಕಟ್ಟುತ್ತಿರುವುದು ಕಂಡು ಬಂದಿದ್ದು ಸಾರ್ವಜನಿಕರ ದೂರಿನ ಮೇಲೆ ಈ ಕಟ್ಟಡ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ ಮತ್ತು ಸದರಿ ಕಟ್ಟಡ ನಿರ್ಮಾಣ ಕಾರ್ಯವನ್ನು ಮುಂದುವರಿಸದಂತೆ ಶ್ರೀ ಮಹಮ್ಮದ್ ಉಬೇದುಲ್ಲಾರವರಿಗೆ ತಿಳಿಸಲಾಗಿದೆ. ಸದರಿ ಜಮೀನನ್ನು ಅಳತೆ ಮಾಡಿಸಿ, ಅನಧಿಕೃತವಾಗಿ ಕಟ್ಟಡ ನಿರ್ಮಿಸುತ್ತಿರುವುದು ಕಂಡು ಬಂದಲ್ಲಿ ಈ ಬಗ್ಗೆ ಕೂಡಲೇ ಕಾನೂನು ಕ್ರಮ ಕೈಗೊಳ್ಳಲಾಗುವುದು.

ಮುಂದುವರೆಯುತ್ತಾ ಉಪ ವಿಭಾಗಾಧಿಕಾರಿಗಳು ಸಕಲೇಶಪುರ ಇವರ ವರದಿಯಲ್ಲಿ ಬೇಲೂರು ಪಟ್ಟಣ ಪಂಚಾಯತ್ ಖಾತೆ ನಂ. (ಹಳೆಯದು 1771/ 907) ಹಾಲಿ ನಮ. 3990/2871ರ ವಿರುದ್ಧ ಎ ಬರ್ಕತ್ ಬಿನ್ ಅಬ್ದುಲ್ ಖಾದರ್ ಪಾಷ, ಬೇಲೂರು ಟೌನ್ ಎಂಬುವವರು ನ್ಯಾಯಾಲಯದಲ್ಲಿ ಕರ್ನಾಟಕ ಪುರಸಭೆ ಕಾಯಿದೆ 1964ರ ಕಲಂ 306 (1)ರ ರೀತ್ಯಾ ಮೇಲ್ಮನವಿ ಸಲ್ಲಿಸಿದ್ದು, ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ತಾತ್ಕಾಲಿಕ ತಡೆಯಾಜ್ಞೆ ನೀಡಿರುವುದಿಲ್ಲವೆಂದು ಸದರಿ ಮೇಲ್ಮನವಿಯನ್ನು ದಿ: 02/4/2005ರಲ್ಲಿ ವಿಚಾರಣೆಗೆ ಅಂಗೀಕರಿಸಿದ್ದು, ಅಂತಿಮ ಆದೇಶವಾಗಿರುವುದಿಲ್ಲ. ಅದರಲ್ಲಿ ಶ್ರೀಮಹಮ್ಮದ್ ಉಬೇದುಲ್ಲಾ ಬಿನ್ ಅಬ್ದುಲ್ ರಹೀಮ್ ಇವರು ಒಂದನೇ ಪ್ರತಿವಾದಿಯಾಗಿಯೂ ಮುಖ್ಯಾಧಿಕಾರಿ,

ಪಟ್ಟಣ ಪಂಚಾಯಿತಿ, ಬೇಲೂರು ರವರನ್ನು ಎರಡನೇ ಪ್ರತಿವಾದಿಯನ್ನಾಗಿಯೂ ಮಾಡಲಾಗಿದೆ. ದಾಖಲೆ ಪ್ರಕಾರ ವಿವಾದಿತ ಸ್ವತ್ತಿನ ಬಗ್ಗೆ ಬೇಲೂರು ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಓ.ಎಸ್. ನಂ. 25/2005ರಂತೆ ದಾವೆ ನಡೆಯುತ್ತಿರುವುದು ತಿಳಿದು ಬಂದಿರುತ್ತದೆ. ಈ ವಿಚಾರಣೆಯನ್ನು ಸದರಿಯವರು ನ್ಯಾಯಾಲಯದಲ್ಲಿ ದಿ:14/07/2005ಕ್ಕೆ ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ.

ಸದರಿ ಅನಧಿಕೃತ ಕಟ್ಟಡ ಕಟ್ಟುಡುವುದು ಗಮನಕ್ಕೆ ಬಂದ ಕೂಡಲೇ ಕಂದಾಯ ಇಲಾಖೆ, ಪೋಲೀಸ್ ಇಲಾಖೆ ಹಾಗೂ ಪಟ್ಟಣ ಪಂಚಾಯಿತಿ ವತಿಯಿಂದ ಸೂಕ್ತ ಕ್ರಮ ವಹಿಸಿದ್ದು, ಸದರಿ ಕಟ್ಟಡದ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿದೆ. ಹಾಗೂ ಅನಧಿಕೃತ ಕಟ್ಟಡ ಕಟ್ಟುತ್ತಿರುವ ಸ್ಥಳವನ್ನು ಸರ್ವೆ ಮಾಡಿಸಿ, ಕಾನೂನು ರೀತಿ ಕಟ್ಟು ನಿಟ್ಟಿನ ಕ್ರಮ ಜರುಗಿಸಲಾಗುವುದು.

ಉಪಾಧ್ಯಕ್ಷರು: ರಘುಪತಿ ಭಟ್, ಅವರು ಇಲ್ಲ: ಸಿಎಸ್. ನಾಡಗೌಡ್ರು ಅವರು ಇಲ್ಲ ಯಡಿಯೂರಪ್ಪನವರು.

ಶ್ರೀ ಬಿ.ಎಸ್.ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಗಂಭೀರವಾದಂಥ ವಿಚಾರ. ಇದು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವ ವಿಷಯವೇ ಅಲ್ಲ. ಪತ್ರಿಕೆಗಳಲ್ಲಿ ಬಂದಿದ್ದರಿಂದ ನನ್ನ ಗಮನಕ್ಕೆ ಬಂದಿದ್ದರಿಂದ ನಾನು ಇವತ್ತು ಪ್ರಸ್ತಾಪಿಸುತ್ತಿದ್ದೇನೆ. ಸೋಮವಾರ ಬೆಳಗಿನ ಜಾವ ಕೇಂದ್ರ ಸರ್ಕಾರದ ಗೃಹ ಇಲಾಖೆಯವರು ಸೋಮವಾರ ಮಧ್ಯರಾತ್ರಿ ರಾಜ್ಯದ ಮುಖ್ಯ ಕಾರ್ಯದರ್ಶಿಗೆ ಒಂದು ಮೆಸೇಜ್ ನ್ನು ತಿಳಿಸಿ, ಇವತ್ತು ಭಯೋತ್ಪಾದಕರ ದಾಳಿಗೆ ವಿಧಾನ ಸೌಧ ತುತ್ತಾಗುವಂಥ ಸಾಧ್ಯತೆಗಳು ಇರುವುದರಿಂದ ಕಟ್ಟೆಚ್ಚರಿಕೆ ವಹಿಸಬೇಕೆನ್ನುವ ಒಂದು ಆದೇಶ ಸೂಚನೆ ಬಂದಿದೆ ಎನ್ನುವಂಥ ಆತಂಕ ತರುವಂಥ ಸಂಗತಿ, ಇದನ್ನು ನಾನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆ. ಪತ್ರಿಕೆಗಳಲ್ಲಿ ಕೂಡ ಬಂದಿದೆ. ಈ ಹಿನ್ನೆಲೆಯಲ್ಲಿ ನಾನು ಈ ಹಿಂದೆ ರಾಜ್ಯದ ಬೇಹುಗಾರಿಕೆ ಇಲಾಖೆಯವರು, ವಿಧಾನಸೌಧ ಮೇಲೆ ದಾಳಿ ಮಾಡುವಂಥ ಸಂಭವ ಇದೆ ಎಂದು ಮೊದಲೇ ಸರ್ಕಾರಕ್ಕೂ ತಿಳಿಸಿದ್ದರು ಎನ್ನುವಂಥ ಮಾಹಿತಿಗಳು ನನ್ನ ಹತ್ತಿರ ಇವೆ. ಇಂಥ ಒಂದು ವಿಶೇಷವಾದ ಸಂದರ್ಭದಲ್ಲಿ ಸರ್ಕಾರ ಈ ಒಂದು ವಿಧಾನ ಸೌಧದ ರಕ್ಷಣೆಯ ದೃಷ್ಟಿಯಿಂದ, ಇಲ್ಲಿ ನಾಡಿನ ಜನಪ್ರತಿನಿಧಿಗಳು ಮತ್ತು ಕನ್ನಡ ನಾಡಿಗೆ ಬಹಳ ಹೆಮ್ಮೆ ತರುವಂಥ ಕಟ್ಟಡವನ್ನು ಉಳಿಸಿಕೊಳ್ಳಬೇಕಾಗಿದೆ. ಮತ್ತು ಯಾವುದೇ ರೀತಿಯ ಆತಂಕ ಇಲ್ಲದೆ ಇಲ್ಲಿ ಅಧಿಕಾರಿಗಳು ಹಾಗೂ ನೌಕರರು ಕೆಲಸ ಮಾಡಬೇಕಾಗುತ್ತದೆ. ಇಂಥ ಒಂದು ಗಂಭೀರವಾದ ವಿಷಯದ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ? ಏಕೆಂದರೆ, ಏನು ಭಯ ಎಂದರೆ,